೨-72-97

# ಮಾನ್ಯ ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಇವರ ನಿಯಮ 72ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.

ವಿಷಯ:

ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳ ನಕಲಿ ಅಂಕಪಟ್ಟಿಗಳ ಸೃಷ್ಟಿ ಮತ್ತು ಮಾರಾಟ ದಂಧೆ ಅವ್ಯಾಹತವಾಗಿ ನಡೆಯುತ್ತಿದ್ದು, ರಾಜ್ಯದ ವಿದ್ಯಾರ್ಥಿಗಳ ನೈತಿಕ ಸ್ಥೈರ್ಯವೇ ಕುಸಿಯುತ್ತಿದೆ, ಸದರಿ ವಿಶ್ವವಿದ್ಯಾನಿಲಯಗಳ ಹೆಸರಲ್ಲಿ ನಕಲಿ ಪ್ರಮಾಣಪತ್ರ ಸೃಷ್ಟಿಸಿ ಮಾರಾಟ ಮಾಡುತ್ತಿರುವ ಗಂಭೀರ ವಿಚಾರವನ್ನು 72ರಡಿ ಸರ್ಕಾರದ ಗಮನ ಸೆಳೆಯಬಯಸುತ್ತೇವೆ.

ಸರ್ಕಾರದ ಉತ್ತರ:

ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾಲಯಗಳ ಪೈಕಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಮಾತ್ರ ನಕಲಿ ಅಂಕಪಟ್ಟಿ ಹಗರಣಗಳನ್ನೊಳಗೊಂಡ 03 ಪ್ರಕರಣಗಳು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ದಾಖಲಾಗಿವೆ. ಆದರೆ, ಮೇಲ್ನೋಟಕ್ಕೆ ದೃಢಪಡುವ ಪೂರ್ವ ಪ್ರಸ್ತಾಪಿತ ನಕಲಿ ಅಂಕಪಟ್ಟಿಗಳ ಹಗರಣಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಅಧಿಕಾರಿ/ನೌಕರರಾಗಲೀ ಅಥವಾ ರಾಜ್ಯ ಸರ್ಕಾರದ ನೌಕರರಾಗಲೀ ಶಾಮೀಲಾಗಿರುವುದಿಲ್ಲ. ಈ ಹಗರಣಗಳಲ್ಲಿ ವಿಶ್ವವಿದ್ಯಾಲಯದ ಹೊರಗಿನವರ ಕೈವಾಡವಿದ್ದು, ಈ ಕುರಿತು ಸಮಗ್ರ ತನಿಖೆಯಿಂದ ದೃಢಪಡಬೇಕಾಗಿರುತ್ತದೆ. ಸದರಿ ಪ್ರಕರಣಗಳಲ್ಲಿ ಕೈಗೊಂಡ ಕ್ರಮದ ವಿವರ ಈ ಕೆಳಗಿನಂತಿರುತ್ತದೆ;

| ವಿದ್ಯಾರ್ಥಿಯ ಹೆಸರು | ಅಂಕಪಟ್ಟಿ ವಿವರ | ವಿಶ್ವವಿದ್ಯಾಲಯವು ಕೈಗೊಂಡ ಕ್ರಮದ ವಿವರ |
|---|---|---|
| 1. ಶ್ರೀ ಎಜಾಜ್ ಅಹಮದ್ ಖಾನ್ | ಕಾನೂನು ಪದವಿಯ 03 ವರ್ಷದ ಅಂಕಪಟ್ಟಿ | ಸದರಿಯವರ ಮೂರು ವರ್ಷದ ಮೂಲ ಅಂಕಪಟ್ಟಿಗಳನ್ನು ಬೆಂಗಳೂರು ವಿಶ್ವವಿದ್ಯಾನಿಲಯವು ವಶಕ್ಕೆ ಪಡೆದು ಈ ಹಗರಣದ ಕುರಿತು ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ದೂರು ಪ್ರಕರಣಕ್ಕೆ ಸಂಬಂಧಿಸಿದಂತೆ, 4th Addl. CMM Court, Nrupatunga Road, Bangalore, ಇಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲಾಗಿದೆ. |
| 2. ಸುನೀಲ್ ಕುಮಾರ್ ಎ.ಎಂ | ಬಿಸಿಎ ಕೋರ್ಸಿನ 1ನೇ ಸೆಮಿಸ್ಟರ್ ಪರೀಕ್ಷೆಯ ಅಂಕಪಟ್ಟಿ | ದಿನಾಂಕ:30.11.2021ರಂದು ಅಮೃತಹಳ್ಳಿ ಪೊಲೀಸ್ ಠಾಣೆಯ ಠಾಣಾಧಿಕಾರಿಗಳಿಂದ ಸಲ್ಲಿಸಲಾದ ಕೋರಿಕೆ ಪ್ರಸ್ತಾವನೆಯಂತೆ ಶ್ರೀ ಸುನೀಲ್ ಕುಮಾರ್ ಎ.ಎಂ., ಇವರು 2006ನೇ ಸಾಲಿನಲ್ಲಿ ಬರೆದ ಬಿಸಿಎ ವ್ಯಾಸಂಗ ಕ್ರಮದ 1ನೇ ಸೆಮಿಸ್ಟರ್ ಪರೀಕ್ಷೆಯ 01 ಅಂಕಪಟ್ಟಿ ಹಾಗೂ 2004-2006ನೇ ಸಾಲುಗಳ ಅವಧಿಯಲ್ಲಿ ಶ್ರೀ ಶ್ರೀನಿವಾಸ್ ರಾಜು ವೆಗೆಸನ ಇವರು ಬರೆದ ಬಿಸಿಎ ವ್ಯಾಸಂಗ ಕ್ರಮದ 01 ರಿಂದ 04 ಸೆಮಿಸ್ಟರ್ ಪರೀಕ್ಷೆಗಳ 04 ಅಂಕಟಪಟಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಪರಿಶೋಧನೆಗೆ ಒಳಪಡಿಸಿದಾಗ ಸದರಿ ಶೈಕ್ಷಣಿಕ ದಾಖಲೆಗಳು ನಕಲಿ/ಕೃತ್ರಿಮ ಎಂದು ಸಾಬೀತಾಗಿರುತ್ತದೆ. ಈ ಬಗ್ಗೆ ಅಮೃತಹಳ್ಳಿ ಪೊಲೀಸ್ ಠಾಣೆಗೆ ವಿಶ್ವವಿದ್ಯಾಲಯದಿಂದ ವರದಿ ಮಾಡಲಾಗಿದೆ. |
| 3. ಶ್ರೀನಿವಾಸ್ ರಾಜು ವೆಗೆಸನಾ | ಬಿಸಿಎ ಕೋರ್ಸಿನ 1 ರಿಂದ 4ನೇ ಸೆಮಿಸ್ಟರ್ ಪರೀಕ್ಷೆಯ ಒಟ್ಟು 04 ಅಂಕಪಟ್ಟಿಗಳು | |

ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ನಕಲಿ/ಕೃತ್ರಿಮಗೊಳಿಸುವುದನ್ನು ತಡೆಯಲು ಈ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಸಿದ್ಧಪಡಿಸಿದ ತರುವಾಯ Karnataka State data Centre (KSDC) ನಲ್ಲಿ ಶೇಖರಿಸಿ ಪ್ರತಿಗಳನ್ನು National Academic depositary (NAD) ಮತ್ತು DigiLocker ನಲ್ಲಿ ಕಡ್ಡಾಯವಾಗಿ ಅಳವಡಿಸುವ ನಾವಿನ್ಯ ತಂತ್ರಜ್ಞಾನ ಆಧಾರಿತ ಹಾಗೂ ಅಂಕೀಯವಾಗಿ ಸುರಕ್ಷಿತವಾದ (Digitally Secured) ಯೋಜನೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವಂತೆ ಹಾಗೂ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಮುದ್ರಿಸದಿರುವಂತೆ ಉನ್ನತ ಶಿಕ್ಷಣ ಇಲಾಖೆಯಡಿಯ ಎಲ್ಲಾ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳಿಗೆ ಸರ್ಕಾರದ ಪತ್ರ ಸಂಖ್ಯೆ: ಇಡಿ/41/ಇಜಿಒವಿ/2020, ದಿನಾಂಕ 04.07.2020ರಲ್ಲಿ ಸೂಚನೆಗಳನ್ನು ನೀಡಲಾಗಿದೆ.

ಕಡತ ಸಂಖ್ಯೆ: ಇಡಿ 256 ಯುಎನ್ಇ 2021

(ಡಾ: ಅಶ್ವತ್ಥ ನಾರಾಯಣ ಸಿ.ಎನ್.)
ಉನ್ನತ ಶಿಕ್ಷಣ, ಐಟಿ & ಬಿಟಿ,
ವಿಜ್ಞಾನ ಮತ್ತು ತಂತ್ರಜ್ಞಾನ,
ಕೌಶಲ್ಯಾಭಿವೃದ್ಧಿ,ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆಯ ಸಚಿವರು.